ಸಾಕ್ಷಿ ಯನ್ನು ದಿಃ 002.09.2024 ರಂದು  ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ  ಪ್ರತಿವಾದಿ ಪರ ವಕೀಲರಿಂದ

1. ನನ್ನ ತಂದೆಯ ಹೆಸರು ನಂಜೇಗೌಡ. ನನ್ನ ತಾತನ ಹೆಸರು ಕಾಳೇಗೌಡ.
2. ನನ್ನ ತಂದೆಯ ಜನಕ ತಂದೆ ಹೆಸರು ಕೃಷ್ಣೇಗೌಡ ಎಂದರೆ ಸರಿ.
3. ನಿಮ್ಮ ತಂದೆಯು ಅವರು ಜನಕ ತಂದೆ ಹಾಗೂ ದತ್ತು ತಂದಯ ಆಸ್ತಿಗಳನ್ನು ಸಹ ಪಡೆದಿದ್ದಾರೆ ಎಂದರೆ, ಕಾಳೇಗೌಡರ ಆಸ್ತಿ ಮಾತ್ರ ತೆಗೆದುಕೊಂಡಿರುವುದು ಎಂದು ನುಡಿಯುತ್ತಾರೆ.

4. ನಾನು ವಿದ್ಯಾಭ್ಯಾಸ ಮಾಡಿಲ್ಲ.
5. ಕಾಳೇಗೌಡರಿಗೆ ಚಪ್ಪರದಳ್ಳಿ ಗ್ರಾಮದಲ್ಲಿ ಒಟ್ಟು ಎಷ್ಟು ಜಮೀನು ಇತ್ತು ಎಂದು ನನಗೆ ಗೊತ್ತಿಲ್ಲ.
6. ನಮಗೆ ಸ.ನಂ.45/8, 45/12, 49/2 ಎ ಗಳನ್ನು ಹಕ್ಕು ಬದಲಾವಣೆ ಮಾಡಿ ಕೊಟ್ಟಿರುತ್ತಾರೆ. ಆ ಬಗ್ಗೆ ಯಾವ ಪತ್ರ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.
7. ನಿಮ್ಮ ತಂದೆ ನಂಜೇಗೌಡರು ಚಪ್ಪರದಳ್ಳಿಯ ಎಷ್ಟು ಆಸ್ತಿ ಮರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.
8. ನಾನು ಈಗ ಹಾರನಹಳ್ಳಿ ಹೋಬಳಿಯ ಭಾರತಿ ನಗರದಲ್ಲಿ ವಾಸವಿದ್ದೇನೆ. ಭಾರತಿ ನಗರದಿಂದ ಚಪ್ಪರದಳ್ಳಿ 5-6 ಕಿ.ಮೀ ಅಂತರ ಇದೆ.
9. ಭಾರತಿ ನಗರದಿಂದ ಚಪ್ಪರದಳ್ಳಿ 15-20 ಕಿ.ಮೀ ದೂರದಲ್ಲಿದೆ ಎಂದರೆ ಸರಿಯಲ್ಲ.
10. ದಾವಾ ಆಸ್ತಿಗಳಿಗೆ ಪ್ರತಿವಾದಿಗಳು ಬಂದು ಗಲಾಟೆ ಮಾಡುತ್ತಿದ್ದರಿಂದ, ಅವರ ಮೇಲೆ ದಾವೆ ಹಾಕಿದ್ದೇನೆ. ದಾವಾ ಜಮೀನಿನಲ್ಲಿ ವ್ಯವಸಾಯವನ್ನು ನಾನೇ ಮಾಡುತ್ತಿದ್ದೇನೆ.
11. ಸ.ನಂ.45/8 ಹಾಗೂ ಸ.ನಂ.45/12 ಅಕ್ಕಪಕ್ಕದಲ್ಲಿ ಇವೆ.
12. ಸ.ನಂ.45/8 ರ ಚಕ್ಕುಬಂದಿ ಗೊತ್ತು. ಪೂರ್ವಕ್ಕೆ: ಸಣ್ಣಕಾಳೇಗೌಡರ ಜಮೀನು, ಪಶ್ಚಿಮಕ್ಕೆ: ನಾಗಮ್ಮ ಕೋಂ ಹನುಮೇಗೌಡ ನವರ ಜಮೀನು, ಉತ್ತರಕ್ಕೆ: ಸ.ನಂ.12 ರಲ್ಲಿ ನನ್ನ ಜಮೀನು, ದಕ್ಷಿಣಕ್ಕೆ: ಹನುಮೇಗೌಡರ ಜಮಿನು. ಸದರಿ ಚಕ್ಕುಬಂದಿಯಲ್ಲಿ 24 ಗುಂಟೆ ಇದೆ.
13. ಸ.ನಂ.45/12 ರ ಚಕ್ಕುಬಂದಿ ಗೊತ್ತು. ಪೂರ್ವಕ್ಕೆ: ಸಣ್ಣಕಾಳೇಗೌಡರ ಮನೆಯವರ ಜಮೀನು, ಪಶ್ಚಿಮಕ್ಕೆ: ನಾಗಮ್ಮ ಕೋಂ ಹನುಮೇಗೌಡ ನವರ ಜಮೀನು, ಉತ್ತರಕ್ಕೆ: ರಾಮಚಂದ್ರ ಬೋವಿ ರವರ ಜಮೀನು, ದಕ್ಷಿಣಕ್ಕೆ: ಸ.ನಂ.45/8 ರ ನನ್ನ ಜಮೀನು. ಸದರಿ ಚಕ್ಕುಬಂದಿಯಲ್ಲಿ 24 ಗುಂಟೆ ಇದೆ. ಸದರಿ ಚಕ್ಕುಬಂದಿಯಲ್ಲಿ 18 ಗುಂಟೆ ಇದೆ.
14. ನೀವು ಸುಳ್ಳು ಚಕ್ಕುಬಂದಿ ನೀಡಿದ್ದೀರಾ ಎಂದರೆ ಸರಿಯಲ್ಲ.
15. ಸ.ನಂ.45/8 ರ ದಕ್ಷಿಣಕ್ಕೆ ಸ.ನಂ.45/12 ರ ಜಮೀನು ಇದೆ ಎಂದರೆ ಸರಿಯಲ್ಲ.

16. ಸ.ನಂ.45/12 ರ ಉತ್ತರಕ್ಕೆ ಸ.ನಂ.45/8 ರ ಜಮೀನು ಇದೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ